**SRUJANI** ISSN: 2583-3510

**Indian Journal of Innovative Research and Development (SIJIRD)**

Volume-1 (02), May-June 2022, Pp. 12-18
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ಕನ್ನಡ ಶತಕ ಸಾಹಿತ್ಯದ ಇತಿಹಾಸ

**ಮೊಹಮ್ಮದ್ ನಿಶ್ವಾನ್*** **ಮತ್ತು ನಿಯಾರ್ಝ್ ಪಿ****

*ಯೆನಪೋಯ ಇನ್ಸ್ಟಿಟ್ಯೂಟ್ ಆಫ್ ಆರ್ಟ್ಸ್ ಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್, ಯೆನೆಪೋಯ ಪರಿಗಣಿಸಲ್ಪಟ್ಟ ವಿಶ್ವವಿದ್ಯಾನಿಲಯ, ಮಂಗಳೂರು

*Abstract:*

ಕನ್ನಡದ ಶತಕ ಸಾಹಿತ್ಯ ಪ್ರಕಾರ ಸಂಸ್ಕೃತ ಸಾಹಿತ್ಯದ ಪ್ರೇರಣೆಯಿಂದ ಬಂದದ್ದು. ಕನ್ನಡದಲ್ಲಿ ರಚಿತವಾದ ಒಟ್ಟು ಶತಕಗಳು ಎಷ್ಟೆಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ದೇಸಿ ಛಂದಸ್ಸಿಗೆ ಪ್ರಾಧಾನ್ಯ ಬಂದಾಗ ಶತಕಗಳ ಛಂದಸ್ಸಿನಲ್ಲಿ ದೇಶೀಯತೆಯ ಪ್ರಭಾವವನ್ನು ಕಾಣುತ್ತೇವೆ. ಕನ್ನಡದಲ್ಲಿ ನವೋದಯ ಹಾಗೂ ನವ್ಯ ಕಾವ್ಯಗಳು ತಲೆಯೆತ್ತಿ ಮೆರೆದಾಡಿದ ಕಾಲದಲ್ಲಿಯೂ ಶತಕಗಳ ರಚನೆ ನಿಲ್ಲಲಿಲ್ಲ. ಶತಕಗಳ ರಚನೆಯಲ್ಲಿ ನವೋದಯ ಕಾವ್ಯದ ಅಲ್ಪಸ್ವಲ್ಪ ಪ್ರಭಾವ ಕಂಡುಬಂದರೂ ನವ್ಯಕಾವ್ಯದ ಧಾಟಿಯಲ್ಲಿ ರಚಿತವಾದ ಶತಕವೊಂದೂ ಕಂಡುಬರುವುದಿಲ್ಲ.

*Key Words:* ಷಟ್ಪದಿ, ವಚನ, ತ್ರಿಪದಿ, ಸಾಂಗತ್ಯ, ಖಂಡಕಾವ್ಯ, ರಗಳೆ, ತ್ರಿಪದಿ

**ಪೀಠಿಕೆ**

ಕನ್ನಡದ ಚಂಪು, ಷಟ್ಪದಿ, ವಚನ, ತ್ರಿಪದಿ, ಸಾಂಗತ್ಯ ಮೊದಲಾದ ಸಾಹಿತ್ಯ ಪ್ರಕಾರಗಳಂತೆ ಶತಕ ಸಾಹಿತ್ಯವೂ ಒಂದಾಗಿದೆ. ನೂರು ಪದ್ಯಗಳಿಂದ ಕೂಡಿದ ಗ್ರಂಥವನ್ನು ಶತಕ ಎಂಬ ಹೆಸರಿನಿಂದ ಕರೆಯುತ್ತಾರೆ. ಕಂದ, ವೃತ್ತ, ಷಟ್ಪದಿ, ಸಾಂಗತ್ಯ ಮೊದಲಾದ ಛಂದಸ್ಸಿನಲ್ಲಿ ರಚಿತವಾಗಿರುತ್ತವೆ. ಇದು ಆತ್ಮನಿಷ್ಠವಾದ ಒಂದು ಕಾವ್ಯ ಪ್ರಕಾರವಾಗಿದೆ. ಮಹಾಕಾವ್ಯ, ಖಂಡಕಾವ್ಯಗಳಂತೆ ವಸ್ತುನಿಷ್ಠವಲ್ಲ, ಕಥಾವಸ್ತುವನ್ನೊಳಗೊಂಡಿರುವುದಿಲ್ಲ. ಕವಿಯ ಮನೋಲಹರಿ ಹರಿದಂತೆ ಹಲವಾರು ಸಂದರ್ಭಗಳಲ್ಲಿ ರಚಿತವಾದ ಪದ್ಯಗಳು ಒಂದು ವಿಷಯದ ಏಕಸೂತ್ರಕ್ಕೆ ಒಳಗಾಗಿರುತ್ತವೆ. ಆದುದರಿಂದ ಶತಕಗಳನ್ನು ಪ್ರಾಚೀನ ಕಾಲದ ಭಾವಗೀತೆಗಳು ಎಂದು ಕರೆಯಬಹುದು. ಭಕ್ತಿ, ಜ್ಞಾನ, ವೈರಾಗ್ಯ, ನೀತಿಗಳನ್ನು ಪ್ರತಿಪಾದಿಸುವುದು ಶತಕಗಳ ಸಾಮಾನ್ಯ ಲಕ್ಷಣ ಎನ್ನಬಹುದು. ನೂರು ಪದ್ಯಗಳಿಂದ ಕೂಡಿದ ಗ್ರಂಥವನ್ನು ಶತಕವೆಂದು ಕರೆಯುವ ವಾಡಿಕೆ ಇದ್ದರೂ ಕನ್ನಡದಲ್ಲಿ 100 ರಿಂದ 128 ಪದ್ಯಗಳಿರುವ ಶತಕಗಳೂ ಕಂಡುಬರುತ್ತವೆ.

ಕನ್ನಡದ ಶತಕ ಸಾಹಿತ್ಯ ಪ್ರಕಾರ ಸಂಸ್ಕೃತ ಸಾಹಿತ್ಯದ ಪ್ರೇರಣೆಯಿಂದ ಬಂದದ್ದು. ಸಂಸ್ಕೃತದಲ್ಲಿ ನ್ಯಾಯಶತಕ, ಭರ್ತೃಹರಿಯ ಶತಕತ್ರಯ, ಮಯೂರನ ಸೂರ್ಯಶತಕ, ಮೊದಲಾದವು ಪ್ರಸಿದ್ಧವಾಗಿವೆ. ಕನ್ನಡದಲ್ಲಿ ನಾನೂರಕ್ಕೂ ಹೆಚ್ಚು ಶತಕಗಳಿವೆಯೆಂದು ವಿದ್ವಾಂಸರು ಹೇಳುತ್ತಾರೆ. ಇವುಗಳಲ್ಲಿ ಕೆಲವು ಶತಕಗಳ ಕರ್ತೃಗಳು ಯಾರೆಂದು ತಿಳಿಯುವುದಿಲ್ಲ. ಡಾ.ಕೃಷ್ಣಭಟ್ ಅರ್ತಿಕಜೆಯವರು ಕನ್ನಡದಲ್ಲಿ ಶತಕ ಸಾಹಿತ್ಯ ಎಂಬ ಪಿಎಚ್.ಡಿ ಮಹಾಪ್ರಬಂಧದಲ್ಲಿ ಶತಕ ಸಾಹಿತ್ಯದ ಬಗ್ಗೆ ಆಳವಾಗಿ ಅಧ್ಯಯನವನ್ನು ಮಾಡಿದ್ದಾರೆ.

ಸಂಖ್ಯಾ ದೃಷ್ಟಿಯಿಂದ ಗಮನಿಸಿದರೆ ತೆಲುಗನ್ನು ಬಿಟ್ಟು ಉಳಿದ ಭಾಷೆಗಳ ಸಾಹಿತ್ಯವನ್ನವಲೋಕಿಸಿದಾಗ ಕನ್ನಡದಲ್ಲಿ ಹೆಚ್ಚು ಶತಕಗಳು ರಚಿತವಾಗಿರುವುದು ಕಂಡುಬರುತ್ತದೆ. ಪ್ರಕಟಿತ ಹಾಗೂ ಅಪ್ರಕಟಿತ ಶತಕಗಳು ಸೇರಿ ಕನ್ನಡದಲ್ಲಿ ಸುಮಾರು ನಾಲ್ಕುನೂರ ಐವತ್ತಕ್ಕಿಂತಲೂ ಹೆಚ್ಚು ಶತಕಗಳ ರಚನೆಯಾಗಿವೆ. ಆದರೆ ಕನ್ನಡದಲ್ಲಿ ರಚಿತವಾದ ಒಟ್ಟು ಶತಕಗಳು ಎಷ್ಟೆಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಆರ್. ನರಸಿಂಹಾಚಾರ್ಯರ ಕರ್ಣಾಟಕ ಕವಿಚರಿತೆಯ ಮೂರು

*Please cite this article as:* ಮೊಹಮ್ಮದ್ ನಿಶ್ವಾನ್ ಮತ್ತು ನಿಯಾರ್ಝ್ ಪಿ. (2022). ಕನ್ನಡ ಶತಕ ಸಾಹಿತ್ಯದ ಇತಿಹಾಸ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(2), 12–18.

ಭಾಗಗಳಲ್ಲೂ ಸೇರಿ ಸುಮಾರು ನೂರು ಶತಕಗಳ ಹೆಸರುಗಳೂ, ಎಸ್. ಶಿವಣ್ಣ ಅವರು ಸಂಗ್ರಹಿಸಿದ ಕರ್ಣಾಟಕ ಕವಿ ಚರಿತೆಯ ಅನುಕ್ತ ಕೃತಿಯಲ್ಲಿ ಸುಮಾರು ಎಪ್ಪತ್ತೆರಡು ಶತಕಗಳ ಹೆಸರುಗಳೂ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಯ ನಾಲ್ಕು ಭಾಗಗಳಲ್ಲಿ ಸುಮಾರು ನಲ್ವತ್ತೈದು ಶತಕಗಳ ಹೆಸರುಗಳೂ ಇವೆ. ಬಿ.ವಿ ಗುಂಜೆಟ್ಟಿ ಅವರ ಕನ್ನಡದಲ್ಲಿ ಶತಕ ಸಾಹಿತ್ಯ ಎಂಬ ಕಿರುಹೊತ್ತಿಗೆಯಲ್ಲಿ ಒಟ್ಟು ನೂರನಲುವತ್ತಮೂರು ಶತಕಗಳೂ, ಹಂಪನಾಗರಾಜಯ್ಯನವರ ಸಾಂಗತ್ಯ ಕವಿಗಳು ಎಂಬ ಕೃತಿಯಲ್ಲಿ ಸುಮಾರು ಇನ್ನೂರ ಮೂವತ್ತಾರು ಶತಕಗಳೂ, ಕಾಶಿವಿಶ್ವನಾಥಶೆಟ್ಟಿ ಅವರ ಶತಕ ಸಾಹಿತ್ಯ ಎಂಬ ಕೃತಿಯಲ್ಲಿ ಸುಮಾರು ನೂರಮೂವತ್ತು ಶತಕಗಳೂ ಉಕ್ತವಾಗಿವೆ.

ವಿವಿಧ ವಿದ್ವಾಂಸರು ಕನ್ನಡದಲ್ಲಿರಬಹುದಾದ ಶತಕಗಳನ್ನು ಅಂದಾಜಿಸಿದ್ದಾರೆ. ಬಸವಾರಾಧ್ಯ (1969) ರವರು ನಾಲ್ಕುನೂರಕ್ಕಿಂತ ಹೆಚ್ಚಾಗಿ ಶತಕಗಳಿರುವುದು ಕಂಡುಬರುತ್ತದೆ ಹಾಗೂ ಶತಕ ಗ್ರಂಥಗಳು ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರವಾಗಿದೆ ಎಂದು ಹೇಳಿದ್ದಾರೆ. ಗು. ಅ. ಶಿವಲಿಂಗಯ್ಯ (1972) ರವರು ಕವಿಗಳ ಸ್ವತಂತ್ರ ಭಾವನೆಯನ್ನು ಸಾರುವ ಪ್ರತೀಕಗಳಾದ ಶತಕ ಸಾಹಿತ್ಯ ಸುಮಾರು ಐದುನೂರಕ್ಕೂ ಮೀರಿವೆ ಎಂಬುದಾಗಿ ಹೇಳಿದ್ದಾರೆ. ಕನ್ನಡದಲ್ಲಿ ತೆಲುಗಿನಲ್ಲಿರುವಷ್ಟು ಶತಕಗಳು ವಿಪುಲವಾಗಿಲ್ಲವಾದರೂ ಅವುಗಳು ಗಣನೀಯವಾಗುವಷ್ಟು ಇರುತ್ತವೆ. ಸುಮಾರು 90 ಶತಕಗಳಿಗೆ ಕಡಿಮೆಯಾಗದು ಎಂದು ಎಂ. ಮರಿಯಪ್ಪಭಟ್ಟ (1967) ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಕನ್ನಡದಲ್ಲಿ ನಾನೂರಕ್ಕಿಂತಲೂ ಹೆಚ್ಚು ಶತಕಗಳಿವೆಯೆಂಬುದಾಗಿ ಕೆಲವರು ಎಣಿಸಿದ್ದಾರೆ. (ಟಿ.ವಿ ವೆಂಕಟಾಚಲಶಾಸ್ತ್ರಿ, 1974).

ಗಣನೀಯ ಸಂಖ್ಯೆಯಲ್ಲಿ ಉಪಲಬ್ಧವಾಗಿರುವ ಕನ್ನಡ ಶತಕ ಸಾಹಿತ್ಯಕ್ಕೆ ವೀರಶೈವ, ಜೈನ ಹಾಗೂ ಬ್ರಾಹ್ಮಣ ಕವಿಗಳು ತಮ್ಮದೇ ಆದ ವಿಶಿಷ್ಟ ಕೊಡುಗೆಗಳನ್ನು ನೀಡಿದ್ದಾರೆ. ಶತಕ ಸಾಹಿತ್ಯವು ಸಂಸ್ಕೃತದ ಸಂಪ್ರದಾಯಕ್ಕೆ ಅನುಗುಣವಾಗಿ ಹುಟ್ಟಿ ಬೆಳೆದಿದ್ದರೂ ದ್ರಾವಿಡ ಭಾಷೆಗಳಲ್ಲಿ ಅದು ತನ್ನದೇ ಆದ ಸ್ವತಂತ್ರ ಮಾರ್ಗವನ್ನು ಅವಲಂಬಿಸಿತು, ಕನ್ನಡದಲ್ಲಿ ರಚಿತವಾದ ಎಲ್ಲ ಶತಕಗಳೂ ಉಪಲಬ್ಧವಾಗಿಲ್ಲ. ಕೆಲವು ಶತಕಗಳ ಹೆಸರು ಮಾತ್ರ ದೊರೆಯುವುದಲ್ಲದೆ ಅವುಗಳ ಬಗ್ಗೆ ಹೆಚ್ಚಿನ ವಿವರಗಳೇನೂ ದೊರೆಯುವುದಿಲ್ಲ. ಕೆಲವು ಶತಕಗಳನ್ನು ಬರೆದವರು ಯಾರೆಂದು ತಿಳಿದು ಬರುವುದಿಲ್ಲ. ಅಂತೆಯೇ ಕೆಲವು ಶತಕಗಳ ಹಾಗೂ ಶತಕಕಾರರ ಕಾಲದ ಬಗ್ಗೆಯೂ ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಿಲ್ಲ. ಹೆಚ್ಚಿನ ಸಾಹಿತ್ಯ ಚರಿತ್ರಕಾರರು ಒಪ್ಪಿಕೊಂಡಿರುವ ಕಾಲ ಹಾಗೂ ಕರ್ತೃಗಳ ಆಧಾರದಲ್ಲಿ ಕನ್ನಡ ಶತಕ ಸಾಹಿತ್ಯದ ಇತಿಹಾಸವನ್ನು ಸಂಕ್ಷಿಪ್ತವಾಗಿ ಇಲ್ಲಿ ಕೊಡಲಾಗಿದೆ. ಶತಕಕಾರರ ದೇಶ, ಕಾಲ, ಮತಗಳಿಗೆ ಸಂಬಂಧಿಸಿದ ಚರ್ಚೆಯನ್ನು ಇಲ್ಲಿ ಎತ್ತಿಕೊಂಡಿಲ್ಲ ಹಾಗೂ ಸಾವಿರದ ಒಂಬೈನೂರರ ಆನಂತರ ಬಂದ ಶತಕಗಳಿಗೆ ಇಲ್ಲಿ ಹೆಚ್ಚಿನ ಗಮನವನ್ನು ಹರಿಸಿಲ್ಲ.

ಕನ್ನಡದಲ್ಲಿ ಸುಮಾರು ಕ್ರಿ.ಶ 1070ರಲ್ಲಿ ನಾಗವರ್ಮಾಚಾರ್ಯನ ಚಂದ್ರ ಚೂಡಾಮಣಿ ಶತಕದಿಂದ ತೊಡಗಿ ಇತ್ತೀಚಿನವರೆಗೂ ಹೆಚ್ಚು ಕಡಿಮೆ ಅವ್ಯಾಹತವಾಗಿ ಶತಕಗಳ ರಚನೆಯಾಗಿದೆ. ಈಗಲೂ ಶತಕಗಳ ರಚನೆಯಾಗುತ್ತಲೇ ಇದೆ. ಇಪ್ಪತ್ತನೆಯ ಶತಮಾನದಲ್ಲಿ ಹಿಂದೆ ಯಾವ ಶತಮಾನದಲ್ಲೂ ರಚಿತವಾಗದಿರುವಷ್ಟು ಶತಕಗಳು ಬಂದಿವೆ. ವೃತ್ತಾದಿಗಳಲ್ಲಿ ರಚಿತವಾದ ಚಂಪೂ ಮೊದಲಾದ ಮಾರ್ಗ ಕಾವ್ಯಗಳ ರಚನೆ ಕಡಿಮೆಯಾಗಿ ರಗಳೆ, ಷಟ್ಪದಿ, ತ್ರಿಪದಿ ಮೊದಲಾದ ದೇಶೀಯ ಛಂದಸ್ಸುಗಳಲ್ಲಿ ಕಾವ್ಯಗಳ ರಚನೆ ಅಧಿಕವಾದಾಗಲೂ ಶತಕಗಳ ರಚನೆಯಾಗಿದೆ.ಮಾರ್ಗಕಾವ್ಯಗಳ ಪ್ರಾಬಲ್ಯವಿದ್ದ ಕಾಲದಲ್ಲಿ ಶತಕಗಳು ಹೆಚ್ಚಾಗಿ ವೃತ್ತಗಳಲ್ಲಿ ರಚಿತವಾಗುತ್ತಿದ್ದವು. ದೇಸಿ ಛಂದಸ್ಸಿಗೆ ಪ್ರಾಧಾನ್ಯ ಬಂದಾಗ ಶತಕಗಳ ಛಂದಸ್ಸಿನಲ್ಲಿ ದೇಶೀಯತೆಯ ಪ್ರಭಾವವನ್ನು ಕಾಣುತ್ತೇವೆ. ಕನ್ನಡದಲ್ಲಿ ನವೋದಯ ಹಾಗೂ ನವ್ಯಕಾವ್ಯಗಳು ತಲೆಯೆತ್ತಿ ಮೆರೆದಾಡಿದ ಕಾಲದಲ್ಲಿಯೂ ಶತಕಗಳ ರಚನೆ ನಿಲ್ಲಲಿಲ್ಲ. ಶತಕಗಳ ರಚನೆಯಲ್ಲಿ ನವೋದಯ ಕಾವ್ಯದ ಅಲ್ಪಸ್ವಲ್ಪ ಪ್ರಭಾವ ಕಂಡುಬಂದರೂ ನವ್ಯಕಾವ್ಯದ ಧಾಟಿಯಲ್ಲಿ ರಚಿತವಾದ ಶತಕವೊಂದೂ ಕಂಡುಬರುವುದಿಲ್ಲ. ಕನ್ನಡ ಶತಕ ಸಾಹಿತ್ಯದ ಬಗ್ಗೆ ಬರೆಯುತ್ತಾ ಹಂಪ ನಾಗರಾಜಯ್ಯನವರು "ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶತಕಗಳ ಇತಿಹಾಸ ಧೀರ್ಘವಾಗಿದೆ, ಪ್ರಾಚೀನವಾಗಿದೆ, ವಿಪುಲವಾಗಿದೆ.

ನಾಗವರ್ಮಾಚಾರ್ಯನ (ಸು.1070) "ಚಂದ್ರಚೂಡಾಮಣಿ ಶತಕ" ಕನ್ನಡದ ಮೊಟ್ಟಮೊದಲನೆಯ ಶತಕ ಗ್ರಂಥ. ಇದಕ್ಕೆ ಜ್ಞಾನಸಾರ ಎಂಬ ಹೆಸರೂ ಇದೆ.ಕೃತಿಯ ವಸ್ತು ವೈರಾಗ್ಯ ಸಂಪಾದನೆ. ಬಂಧ ಲಲಿತವಾಗಿಯೂ ಗಂಭೀರವಾಗಿಯೂ ಇದೆಯೆಂದು ವಿದ್ವಾಂಸರು ಅಭಿಪ್ರಾಯಟ್ಟಿದ್ದಾರೆ. ಅನಂತರ ಕೊಂಡುಗುಳಿ ಕೇಶಿರಾಜನ (ಸು.1120) ಷಡಕ್ಷರಕಂದ ಕಂಡುಬರುತ್ತದೆ.ಇದೇ ಕಾಲದಲ್ಲಿ ಕವಿಕಾಮ (ಸು.1200) ಸ್ತನಶತಕವೆಂಬ ಗ್ರಂಥವನ್ನು ರಚಿಸಿರುವುದಾಗಿ ಪಾರ್ಶ್ವನಾಥ ಪುರಾಣದಿಂದ ತಿಳಿದುಬರುತ್ತದೆ. ಆದರೆ ಗ್ರಂಥ ಉಪಲಬ್ಧವಿಲ್ಲ. ಇದು ಬಹುಶಃ ಸಂಸ್ಕೃತದ 'ವಕ್ಷೋಜಶತಕ'ದ ಹಾಗೆ ವರ್ಣನಾತ್ಮವಾಗಿರಬೇಕು.

ಕನ್ನಡದ ಶತಕ ಸಾಹಿತ್ಯದಲ್ಲಿ ಹರಿಹರನ ಪಾತ್ರ ಪ್ರಮುಖವಾದದ್ದು. ಇವನ ಪಂಪಾ ಶತಕ, ರಕ್ಷಾಶತಕಗಳು ಉನ್ನತ ಕಾವ್ಯಗುಣಗಳಿಂದ, ಭಾವಗೀತೆಯ ಲಕ್ಷಣಗಳಿಂದ ಕೂಡಿದ್ದು ಸಹೃದಯರ ಮನಸೆಳೆದಿದೆ. ಪಂಪಾ ಶತಕದಲ್ಲಿ ಈ ಕವಿಯ ಹೃದಯ ತುಡಿದಿರುವಷ್ಟು, ವಿರೂಪಾಕ್ಷನನ್ನು ಸ್ತುತಿಸಿರುವಷ್ಟು, ಆತ್ಮವನ್ನು ಅರ್ಪಿಸಿ ಹಿಗ್ಗಿರುವಷ್ಟು ಮತ್ತಾವ ಕವಿಯ ಹೃದಯವೂ ತುಡಿದಿಲ್ಲ, ಸ್ತುತಿಸಿಲ್ಲ, ಹಿಗ್ಗಿಲ್ಲ. ರಕ್ಷಾಶತಕದಲ್ಲಿ ಕವಿ ತನ್ನ ತಪ್ಪುಒಪ್ಪುಗಳನ್ನೆಲ್ಲ ತೋಡಿಕೊಂಡು ನಿರ್ಲಿಪ್ತವಾಗಿ, ಶಾಂತನಾಗಿ ತನ್ನ ಅಂತರಂಗವನ್ನೆಲ್ಲಾ ಶೋಧಿಸಿಕೊಂಡಿದ್ದಾನೆ. ಸಂಸಾರದ ಸುಳಿಗೆ ಸಿಕ್ಕ ಜೀವ ಅದರಿಂದ ಹೊರಬರಲು ನಡೆಸಿರುವ ಮನಸ್ಸಿನ ಹೋರಾಟ ಸೂಕ್ಷ್ಮವಾಗಿ ಇದರಲ್ಲಿ ಪ್ರಕಟಗೊಂಡಿದೆ.

ಸು.16ನೆಯ ಶತಮಾನಕ್ಕೆ ಸೇರಿದ ಪುಲಿಗೆರೆ ಸೋಮನ 'ಸೋಮೇಶ್ವರ ಶತಕ' ಕನ್ನಡದ ನೀತಿ ಶತಕಗಳಲ್ಲಿ ಅಗ್ರಸ್ಥಾನವನ್ನು ಪಡೆದು ಜನಪ್ರಿಯವಾಗಿದೆ. ನೀತಿ ಪ್ರತಿಪಾದನೆ ಕೆಲವೆಡೆ ಕಾವ್ಯಾತ್ಮಕವಾಗಿ ನಿರೂಪಿತವಾಗಿರುವುದು ಈ ಶತಕದ ಹೆಗ್ಗಳಿಕೆಗೆ ಕಾರಣವಾಗಿದೆ. ಕೆಲವಂ ಬಲ್ಲವರಿಂದ ಕಲ್ತು, ರವಿಯಾಕಾಶಕ್ಕೆ ಭೂಷಣಂ, ಚರಿಪಾರಣ್ಯದ ಪಕ್ಷಿಗೊಂದು ತರುಗೊಡ್ಡಾಗಲ್ ಮುಂತಾದ ಪದ್ಯಗಳು ಜನಮನದಲ್ಲಿ ನೆಲೆಸಿವೆ. ಶೈಲಿ ಅನುಭವದ ನುಡಿಗಳಿಂದ, ಗಾದೆ ಮಾತುಗಳಂಥ ಸೂಕ್ತಿಗಳಿಂದ, ಜನಸಾಮಾನ್ಯರ ಹೃದಯಕ್ಕೆ ನೇರವಾಗಿ ತಾಗುವಂತಿದೆ. ದೇಪರಾಜ (ಸು. 1410) ಪರಿವರ್ಧಿವಿ ಷಟ್ಪದಿಯಲ್ಲಿ ಸಂಸ್ಕೃತ ಅಮರುಕ ಶತಕವನ್ನು ಕನ್ನಡಿಸಿದ್ದಾನೆ. ಅದೇ ಅಮರುಕವನ್ನು ಚಿಕುಪಾಧ್ಯಾಯ (ಸು. 1672) ಅನುವಾದ ಮಾಡಿದ್ದಾನೆ. ಚಂದ್ರಕವಿ (ಸು.1430) ಗುರುಮೂರ್ತಿ ಶಂಕರಶತಕವನ್ನು ರಚಿಸಿದ್ದಾನೆ. ಮಗ್ಗೆಯ ಮಾಯಿದೇವನ (ಸು. 1430) ಶಿವಾಧವ, ಶಿವಾವಲ್ಲಭ, ಮಹದೈಪುರೀಶ್ವರ ಶತಕಗಳು ಕ್ರಮವಾಗಿ ಭಕ್ತಿ, ಜ್ಞಾನ, ವೈರಾಗ್ಯವನ್ನು ಪ್ರತಿಪಾದಿಸುತ್ತದೆ. ಈ ಶತಕತ್ರಯ ಜನಪ್ರಿಯವಾಗಿದ್ದರೂ ಶಾಸ್ತ್ರ ಮತ್ತು ಪಾಂಡಿತ್ಯ ಭಾರದಿಂದ ಕುಸಿಯುತ್ತಿದೆ. ಹರಿಹರದಲ್ಲಿ ಕಾಣುವಂತೆ ಭಾವತೀವ್ರತೆಯಾಗಲಿ ಕಲ್ಪನಾಶಕ್ತಿಯಾಗಲೀ ಸರಳವಾದ ರಮ್ಯ ಶೈಲಿಯಾಗಲೀ ಇವನಲ್ಲಿ ಕಂಡುಬರುವುದಿಲ್ಲ. ಆದರೆ ಜನತೆಯ ಆಚಾರ ವಿಚಾರ ಹೇಳುವೆಡೆ ಮಾತ್ರ ಸೊಗಸು ಕಂಡುಬರುತ್ತದೆ.

ಬ್ರಹ್ಮಾನಂದ ಯೋಗೀಂದ್ರನೆಂಬವನು 1840ರಲ್ಲಿ ಬ್ರಹ್ಮಾನಂದ ಶತಕವನ್ನು ಬರೆದಿರುವನೆಂದು ಹಂಪನಾ ತಿಳಿಸುತ್ತಾರೆ. ಈ ಬಗ್ಗೆ ಹೆಚ್ಚಿನ ವಿವರಗಳು ತಿಳಿಯುವುದಿಲ್ಲ. ಕ್ರಿ.ಶ. ಸುಮಾರು 1841ರಲ್ಲಿದ್ದ ದೇವಲಾಪುರದ ನಂಜುಂಡನೆಂಬ ಕವಿಯು ಕೃಷ್ಣರಾಜೇಂದ್ರ, ಭಕ್ತಿ ಸಾರೋಷ್ಟೋತ್ತರ ಶತಕ, ಕೃಷ್ಣರಾಜ ಶೃಂಗಾರ ಶತಕ ಮತ್ತು ತಿಬ್ಬಾಂಬಿಕಾ ಶತಕಗಳನ್ನು ಬರೆದಿದ್ದಾನೆ. ಕೃಷ್ಣರಾಜ ಶೃಂಗಾರ ಶತಕದಲ್ಲಿ 101 ಕಂದಗಳಿವೆ. ಅಲ್ಲಲ್ಲಿ ಗದ್ಯಭಾಗಗಳೂ ಇವೆ. ಕೃಷ್ಣರಾಜನೂ ಗಜಾರೂಢನಾಗಿ ಬೀದಿಯಲ್ಲಿ ಬರುವಾಗ ಅವನನ್ನು ನೋಡಿದ ಪುರಸುಂದರಿಯರ ಮನೋವೃತ್ತಿಗಳನ್ನು ಕವಿ ವರ್ಣಿಸಿದ್ದಾನೆ. ತಿಬ್ಬಾಂಬಿಕಾ ಶತಕದ ಬಗ್ಗೆ ಯಾವ ವಿವರವೂ ತಿಳಿದಿಲ್ಲ. 1841ರಲ್ಲಿ ಬ್ರಹ್ಮ ಅಥವಾ ಚಂದ್ರ ಸಾಗರವರ್ಣಿ ಎಂಬ ಕವಿಯು ಬ್ರಹ್ಮ ಶತಕೋಶವನ್ನು ಬರೆದಿರುವುದಾಗಿ ಹೇಳಿದ್ದಾರೆ. ಅವರು ಈ ಬಗ್ಗೆ ಹೆಚ್ಚಿನ ವಿವರ ನೀಡಿಲ್ಲ. ಈ ಬ್ರಹ್ಮ ಶತಕೋಶವೇ ಬ್ರಹ್ಮ ಶತಕವಾಗಿರಬಹುದೇ ಎಂಬ ಸಂದೇಹ ಬರುತ್ತದೆ.

ಕ್ರಿ.ಶ ಸುಮಾರು 1770 ಹಾಗೂ 1841ರ ಕಾಲದಲ್ಲಿ ಜೈನ ಕವಿಯಾದ ದೇವಚಂದ್ರನು ಭಕ್ತಿಸಾರಶತಕತ್ರಯ ಹಾಗೂ ಸುಮೇರು ಶತಕವನ್ನು ಬರೆದಿರುವುದಾಗಿ ಕವಿಚರಿತೆಕಾರರು ಹೇಳುತ್ತಾರೆ. ಕ್ರಿ.ಶ ಸುಮಾರು 1862ರಲ್ಲಿ ಮಂಡ್ಯ ರಾಮಾನುಜಯ್ಯಂಗಾರರು ಮುಕ್ತಿ ಶತಕವನ್ನು ಬರೆದಿದ್ದಾರೆ. ಮುಮ್ಮಡಿ ಕೃಷ್ಣರಾಜರು 1948ರಲ್ಲಿ ನಂಜುಂಡ ಶತಕವನ್ನು ಬರೆದರು. 1843ರಿಂದ 1891ರ ಕಾಲದಲ್ಲಿದ್ದ ಬಸವಪ್ಪ ಶಾಸ್ತ್ರಿಗಳು ಶಂಕರ ಶತಕವನ್ನು ಬರೆದಂತೆ ತಿಳಿಯುತ್ತದೆ. ಇದು ಪ್ರಕಟವಾಗಿಲ್ಲ. ಇವರು ಭರ್ತೃಹರಿಯ ಶತಕತ್ರಯಗಳನ್ನು ಕನ್ನಡ ಭರ್ತೃಹರಿ ಸಂಭಾಷಿತವೆಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ.

ಹತ್ತಕ್ಕೂ ಹೆಚ್ಚು ಶತಕಗಳು 16ನೆಯ ಶತಮಾನದಲ್ಲಿ ರಚಿತವಾಗಿವೆ. ಗುಮ್ಮಟಾರ್ಯ(ಸು. 1500), ಸಿರಿನಾಮಧೇಯ(ಸು. 1550), ಚೆನ್ನಮಲ್ಲಿಕಾರ್ಜುನ (ಸು.1560) ಇವರು ಒಂದೊಂದು ಶತಕವನ್ನೂ ವೀರಭದ್ರರಾಜ (ಸು. 1530) ಐದು ಶತಕಗಳನ್ನು ರಚಿಸಿದ್ದಾರೆ. ರತ್ನಾಕರವರ್ಣಿ ಈ ಶತಮಾನದ ಪ್ರಮುಖ ಶತಕ ಕರ್ತೃ. ಇವನು ರತ್ನಾಕರ ಶತಕ, ಅಪರಾಜಿತೇಶ್ವರ ಶತಕ, ತ್ರಿಲೋಕ ಶತಕಗಳನ್ನು ರಚಿಸಿದ್ದಾನೆ. ರತ್ನಾಕರ ಶತಕದಲ್ಲಿ ನೀತಿಬೋಧೆಗಿಂತ ಹೆಚ್ಚು ವೈರಾಗ್ಯಬೋಧೆ ಕಂಡುಬರುತ್ತದೆ. ಕೆಲವು ವೃತ್ತಗಳ ಬಂಧ ಮಧುರವಾಗಿದೆ.ಅಪರಾಜಿತೇಶ್ವರ ಶತಕದಲ್ಲಿ ಜೈನದೃಷ್ಟಿ ಪ್ರಧಾನವಾಗಿದ್ದರೂ ಆರ್ತಭಕ್ತನ ವಾಣಿ ನುಡಿಯುತ್ತದೆ. ಅನುಭವ ಭಾವರೂಪಿಯಾಗಿ ತೀವ್ರತೆಯಿಂದ ಹೊರಹೊಮ್ಮುತ್ತದೆ. ಈತನ ತ್ರಿಲೋಕ ಜೈನಾಗಮದಲ್ಲಿ ಹೇಳಿರುವ ಭೂಗೋಳ ವಿವರಗಳಿಂದ ಕೂಡಿದೆ. ಕನಕದಾಸರ ಹರಿಭಕ್ತಿಸಾರ ವಿಷ್ಣುಸ್ತುತಿ ಪರವಾದ ಶತಕ. ಭಕ್ತಿ ಪ್ರತಿಪಾದನೆ ಈ ಶತಕದ ವಸ್ತು.

17ನೆಯ ಶತಮಾನದಲ್ಲಿ ಶಾಂತವೀರದೇಶಿಕ, ಹಿರಿಯೂರುರಂಗ, ತಿರುಮಲಾರ್ಯ ಮೊದಲಾದವರು

ಶತಕಗಳನ್ನು ರಚಿಸಿದ್ದಾರೆ.ಸಮಾದಿ ಸಿದ್ಧೇಶ್ವರನೆಂಬುವನ ಶಿಷ್ಯ ಶಾಂತಾಚಾರ್ಯ (ಸು. 1700) ಸ್ಕಾಂದಪುರಾಣದ ಆಧಾರದ ಮೇಲೆ ಮರಣಮಣಿದರ್ಪಣ ಶತಕ ಎಂಬ ಕೃತಿಯನ್ನು ರಚಿಸಿದ್ದಾನೆ. ಚಿಕುಪಾಧ್ಯಾಯನ ಶೃಂಗಾರ ಶತಕ ಸಾಂಗತ್ಯ, ರಂಗಧಾಮ ಶತಕ ಸಾಂಗತ್ಯಗಳು ಸಾಂಗತ್ಯ ಛಂದಸ್ಸಿನಲ್ಲಿರುವುದು ಗಮನಾರ್ಹ.

1893ರಲ್ಲಿ ಶ್ರೀ ಗಣೇಶ ಭಕ್ತಿಸಾರ ಶತಕವೊಂದು ರಚಿತವಾಗಿದೆಯೆಂದು ಹಂಪನಾ ಅವರ ಸಾಂಗತ್ಯ ಕವಿಗಳು ಎಂಬ ಕೃತಿಯಿಂದ ತಿಳಿದುಬರುತ್ತದೆ. ಆದರೆ ಇದನ್ನು ಬರೆದ ಕವಿ ಯಾರೆಂದು ಗೊತ್ತಿಲ್ಲ. ಇದೇ ವರ್ಷ ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳಿಂದ ಭಾಷಾ ಸಂಘ ಪೋಷಿಣಿ ಎಂಬ ಶತಕದ ರಚನೆಯಾಯಿತು. ಕರ್ಣಾಟ ಭಾಷಾ ಸಂಜೀವಿನಿ ಸಂಘಕ್ಕೆ ಆರಂಭದಲ್ಲಿ ಸೇರಿದ ಸದಸ್ಯರು ನಿರುತ್ಸಾಹಿಗಳಾದಾಗ ಅವರಿಗೆ ಸಂಘದಲ್ಲಿ ಉತ್ಸಾಹ ಹುಟ್ಟುಗಲೋಸುಗ ಇದನ್ನು ಅವರು ಬರೆದರು. ಇದರಲ್ಲಿ 108 ಕಂದಗಳಿವೆ. ವೈ.ವಿ ಕೃಷ್ಣಾಚಾರ್ಯರಿಂದ ಜನೋಪಕಾರಾರ್ಥವಾಗಿ ರಚಿಸಲ್ಪಟ್ಟ ಲೋಕದರ್ಪಣಂ ಎಂಬ ನೀತಿ ಶತಕದಲ್ಲಿ ಕಂದ ಹಾಗೂ ವೃತ್ತಗಳು ಸೇರಿ ಒಟ್ಟು 100 ಪದ್ಯಗಳಿವೆ. 1898ರಲ್ಲಿ ಎಸ್.ಜಿ. ನರಸಿಂಹಾಚಾರ್ ಮತ್ತು ಎಂ.ಎ ರಾಮಾನುಜ ಅಯ್ಯಂಗಾರ್ ಇಬ್ಬರೂ ಸೇರಿ ಕೆಲವು ಕನ್ನಡದ ಶ್ರೇಷ್ಠ ಕವಿಗಳ ನೀತಿ ಬೋಧಕವಾದ ಪದ್ಯಗಳನ್ನು ಸಂಗ್ರಹಿಸಿ 'ಸುಭಾಷಿತ ಮುಕ್ತಕ ಶತಕ' ಎಂದು ಹೆಸರಿಟ್ಟರು. ಇದರಲ್ಲಿ ಕವಿರಾಜಮಾರ್ಗದಿಂದ ತೊಡಗಿ ಚಿಕುಪಾಧ್ಯಾಯ ಕವಿಯ ಕೃತಿಗಳವರೆಗಿನ ಅನೇಕ ಪ್ರಸಿದ್ಧ ಕವಿಗಳ ಕೃತಿಗಳಿಂದ ಉದ್ಧೃತವಾದ 108 ನೀತಿ ಬೋಧಕ ಕಂದ ಹಾಗೂ ವೃತ್ತಗಳಿವೆ. 1898ರಲ್ಲಿ ಮಾಗಡಿಯ ವೈಷ್ಣವಿ ಕವಿಯಾದ ಕೆ.ರಾಮಸ್ವಾಮ್ಯೆಯ್ಯಂಗಾರ್ಯರಿಂದ 'ಒಳ್ನುಡೆಗನ್ನಡಿ' ಎಂಬ ನೀತಿ ಶತಕ ರಚಿತವಾಯಿತು.ಇದರಲ್ಲಿ 111 ಕಂದ ಪದ್ಯಗಳಿವೆ. ನೀತಿಯು ನಿರೂಪಿತವಾಗಿದೆ. ಇವರು ದಾರಿದ್ರ್ಯ ಶತಕವನ್ನೂ ಬರೆದಿದ್ದಾರೆ. ಅಪ್ರಕಟಿತವಾದ ಈ ಕೃತಿಯ ವಿವರ ತಿಳಿದಿಲ್ಲ.

ಹತ್ತೊಂಬತ್ತನೆಯ ಶತಮಾನದಲ್ಲಿ ಇನ್ನೂ ಅನೇಕ ಶತಕಗಳು ರಚಿತವಾಗಿವೆ. ವೀರಶೈವ ಕವಿಯಾದ ಮಹಾಂತದೇಶಿಕನು ರಾಜೇಶ್ವರ ಶತಕ ಮತ್ತು ವೇಣುಗೋಪಾಲ ಶತಕವನ್ನೂ ಮೈಸೂರಿನ ವೀರನಗೆರೆ ಪುಟ್ಟಣ್ಣ ಎಂಬ ವೀರಶೈವ ಕವಿಯು 108 ಭಾಮಿನಿ ಷಟ್ಪದಿಗಳಲ್ಲಿ ಅಂಕನಾಥೇಶ ಭಕ್ತಿ ವಿಜಯವನ್ನೂ ಕಂದದಲ್ಲಿ ಚಾಮರಾಜೇಂದ್ರ ಶತಕವನ್ನೂ ಬರೆದಿರುವನು. ಮಾಧ್ವಕವಿಯಾದ ಗರಣಿಕೃಷ್ಣಾಚಾರ್ಯನು ನೀತಿಶತಕವನ್ನೂ ಧಾರವಾಡ ಪ್ರಾಂತದ ಕೃಷ್ಣರಾಯ ಬಂಕಾಪುರ ಎಂಬ ಮಾಧ್ವಕವಿಯು ನಾನಾ ವೃತ್ತಗಳಲ್ಲಿ ಮುಳಬಾಗಿಲವರ ಚರಿತ್ರೆ ಶತಕವನ್ನೂ ಮಂಗಳೂರಿನ ಬ್ರಾಹ್ಮಣ ಕವಿ ಕೆರೋಡಿ ಸುಬ್ಬರಾವ್ ಶೃಂಗಾರ ಶತಕವನ್ನೂ, ದ್ಯಾಂಪುರ ಚೆನ್ನಕವಿಯು ಕಲ್ಲಿನಾಥ ಶತಕ ಮತ್ತು ಕಾಲಕಾಲೇಶ್ವರ ಶತಕಗಳನ್ನೂ ಬರೆದಿರುವರು. ಧಾರವಾಡ ಪ್ರಾಂತದ ಭೀಮಾಜಿ ಶ್ರೀನಿವಾಸ ಅಡಬಡ್ಡಿ ಎಂಬ ಬ್ರಾಹ್ಮಣ ಕವಿಯು ನೀತಿದರ್ಪಣವೆಂಬ ಶತಕವನ್ನು ಬರೆದಿರುವನು. ಕೃಷ್ಣಗಿರಿ ನರಸಿಂಹ ಪುತ್ರ ವೆಂಕಟರಮಣನೆಂಬ ಕವಿ ಭರ್ತೃಹರಿಯ ನೀತಿ, ಶೃಂಗಾರ, ವೈರಾಗ್ಯ ಶತಕಗಳನ್ನು ಭರ್ತೃಹರಿ ಸುಭಾಷಿತವೆಂಬ ಹೆಸರಿನಲ್ಲಿ ಅನುವಾದಿಸಿದ್ದಾನೆ. ಭೋಳಾರ ರಾಮಕೃಷ್ಣಯ್ಯನವರಿಂದ ನವಗ್ರಹ ಶತಕ ಮತ್ತು ಚಂಡಿಕಾ ಶತಕ ಅಥವಾ ದೇವೀ ಸ್ತೋತ್ರ ರಚಿತವಾದವು.ಅದವಾಣಿಯ ತಂಬಳ ಬೀಡು ವಿಚಾರಗಳು ಇಲ್ಲಿ ವರ್ಣಿತವಾಗಿವೆ. 'ಗುರುನಂದೀಶಾ' ಎಂಬ ಅಂಕಿತವುಳ್ಳ, ಶಿವಪ್ರಾರ್ಥನಾ ಶತಕವೊಂದು ಹದಿನೇಳನೆಯ ಶತಮಾನದಲ್ಲಿ ರಚಿತವಾದಂತೆ ತಿಳಿಯುತ್ತದೆ.

ಕ್ರಿ.ಶ 1700 ರಲ್ಲಿ ಅನುಭವ ಶತಕ, ಕೇಶವ ಶತಕ, ಪಶ್ಚಿಮ ರಂಗಧಾಮ ಶತಕ, ಪ್ರಾಣಲಿಂಗ ಶತಕ. ಪ್ರಾಣೇಶ ಶತಕ, ಭಾವಾರ್ಥ ಶತಕ, ಮರಣ ಮಣಿದರ್ಪಣ ಶತಕ, ಪ್ರಾಣಲಿಂಗ ಶತಕ, ಪ್ರಾಣೇಶ ಶತಕ, ಭಾವಾರ್ಥ ಶತಕ, ಮರಣ ಮಣಿದರ್ಪಣ ಶತಕ, ಮಲ್ಲಿಕಾರ್ಜುನ ಶತಕ, ಮುಕ್ತಿರಾಮೇಶ್ವರ ಶತಕ, ವೈಕುಂಠ ನಾರಾಯಣ ಶತಕ, ಕೃಷ್ಣ ಕರ್ಣಾಮೃತ, ಕೃಷ್ಣಗೋಪೀ ವಿಲಾಸ, ವಿರೂಪಾಕ್ಷ ಶತಕ ಮೊದಲಾದವುಗಳು ರಚಿತವಾಗಿವೆ. ವೀರಶೈವ ಕವಿಯಾದ ಶಾಂತವೃಷಭೇಶನು ಅನುಭವ ಶತಕವನ್ನು ರಚಿಸಿದ್ದಾನೆ. ಶಾಂತೇಶ್ವರನ ಕರುಣೆಯಿಂದ ತಾನು ಈ ಕೃತಿಯನ್ನು ಬರೆದಂತೆ ಹೇಳಿದ್ದಾನೆ. ಅನುಭವ ಶತಕದಲ್ಲಿ 115 ಕಂದ ಪದ್ಯಗಳಿವೆ. ತನ್ನ ಗ್ರಂಥವನ್ನು ಕುರಿತು 'ಶರಣರು ಕೇಳಲು ಭ್ರಾಂತಳಿದಪರು ವೀರಶೈವದ ಮತಮಂ' ಎಂದು ಕವಿ ಹೇಳಿಕೊಂಡಿದ್ದಾನೆ. ಈ ಕೃತಿಯು ಇನ್ನೂ ಪ್ರಕಟವಾಗಿಲ್ಲ. ಬ್ರಾಹ್ಮಣ ಕವಿಯಾದ ಅದ್ವೈತಾನಂದನು ಕೇಶವ ಶತಕವನ್ನು ಬರೆದಿರುವನು. ಈತನ ಊರು ಹಳೇಬೀಡು. ಇವನು ಗಾಳಿಪೂಜೆಯ ಪೂರ್ಣಾನಂದಯೋಗೀಶ್ವರನ ಶಿಷ್ಯ.ಈ ಶತಕ ಕಂದದಲ್ಲಿದೆ.ಇದರಲ್ಲಿ ಕವಿ ವೇಲಾಪುರಿಯ ಅಥವಾ ಬೇಲೂರಿನ ಚೆನ್ನಕೇಶವ ದೇವರನ್ನು ಸ್ತುತಿಸಿದ್ದಾನೆ. ಇದು ಇನ್ನೂ ಅಪ್ರಕಟಿತವಾಗಿಯೇ ಇದೆ.

ಪಶ್ಚಿಮ ರಂಗಧಾಮ ಶತಕವನ್ನು ಬರೆದವರು ಲಕ್ಷ್ಮಯ್ಯ ಎಂಬ ಕವಿ. ಇವನ ತಂದೆ ರಂಗನಾಥ. ವೃತ್ತದಲ್ಲಿ ರಚಿತವಾದ ಈ ಶತಕವು ಶ್ರೀರಂಗಪಟ್ಟಣದ ರಂಗನಾಥ ದೇವರ ಸ್ತುತಿರೂಪವಾಗಿದೆ. 'ಪಶ್ಚಿಮ ರಂಗನಾಯಕಾ' ಎಂಬ ಅಂಕಿತಗಳಿಂದ ಪದ್ಯಗಳು ಅಂತ್ಯವಾಗುತ್ತದೆ. ಪ್ರಾಣಲಿಂಗ ಶತಕದ ಕರ್ತೃ ಗುರುವ ಎಂಬ ವೀರಶೈವ ಕವಿ. ಇವನು ಹಂಪೆಯ ದಾನಪ್ಪನ ಮಗನು. 'ಮತ್ಪ್ರಾಣಲಿಂಗೇಶ್ವರ' ಎಂಬ

ಅಂಕಿತದಿಂದ ಕೂಡಿದ 101 ವೃತ್ತಗಳುಳ್ಳ ಈ ಶತಕವು ವೀರಶೈವ ಸಿದ್ಧಾಂತವನ್ನೂ ಅಲ್ಲಲ್ಲಿ ಪುರಾತನ ಚರಿತವನ್ನೂ ತಿಳಿಸುತ್ತದೆ.

18 ಮತ್ತು 19ನೆಯ ಶತಮಾನಗಳಲ್ಲಿ ವೃತ್ತಕಂದಗಳಲ್ಲಿ ಮಾತ್ರವಲ್ಲದೆ ಬಗೆಬಗೆಯ ಷಟ್ಪದಿಗಳಲ್ಲೂ ಹೇರಳವಾಗಿ ಶತಕಗಳು ರಚಿತವಾದವು. ಕೇಶವನು ತಿರುವೇಂಗಡಾಚಾರ್ಯ ಶತಕ ಎಂಬ ಪಂಚಶತಕವನ್ನು ಬರೆದಿದ್ದಾನೆ. ಇದರಲ್ಲಿ 597 ಪದ್ಯಗಳಿವೆ. ಶಾಲ್ಯದ ಕೃಷ್ಣರಾಜನು ಸದಾಶಿವಶತಕ, ಅಪ್ರಸ್ತುತ ಪ್ರಶಂಸಾ ಶತಕವನ್ನು ಬರೆದಿದ್ದಾನೆ. ಇದರಲ್ಲಿ 597 ಪದ್ಯಗಳಿವೆ. ಶಾಲ್ಯದ ಕೃಷ್ಣರಾಜನು ಸದಾಶಿವಶತಕ, ಅಪ್ರಸ್ತುತ ಪ್ರಶಂಸಾ ಶತಕಗಳನ್ನು ರಚಿಸಿದ್ದಾನೆ. ದೇವಲಾಪುರದ ನಂಜುಂಡನು ಕೃಷ್ಣರಾಜ ಶೃಂಗಾರಶತಕ, ತಿಪ್ಪಾಂಬಿಕಾ ಶತಕಗಳನ್ನು ರಚಿಸಿದ್ದಾನೆ. ಅಳಿಯ ಲಿಂಗರಾಜನ ಮಹಾಲಿಂಗ ಶತಕ. ಮುಮ್ಮಡಿ ಕೃಷ್ಣಭೂಪಾಲನ ಸಿರಿನಂಜುಂಡಶತಕ, ಸರಳ ಸುಂದರವಾಗಿದೆ. ಕಪ್ಪಿನಿಯ (ಸು. 1800) ನಂಜುಂಡಶತಕ ಕಂದದಲ್ಲಿ ರಚಿತವಾಗಿದೆ. ಚಾಮಸೂನು ಶ್ರೀಕಂಠ ಕಲಕಂಠ ಶತಕವನ್ನೂ, ಪರ್ವತಕವಿ ಚಂದ್ರಲೇಖಾ ವಸಂತ ಶತಕವನ್ನೂ ರಚಿಸಿದ್ದಾನೆ.

19 ಮತ್ತು 20ನೆಯ ಶತಮಾನದ ಆದಿಯಲ್ಲಿ ಗುರುಗಳ, ರಾಜರ ಜೀವನವನ್ನು ನಿರೂಪಿಸುವ ಇನ್ನೊಂದು ಬಗೆಯ ಶತಕಗಳನ್ನು ಕಾಣಬಹುದು. ಕೃಷ್ಣರಾಜವರ್ಧಂತಿ ಶತಕ, ಚಾಮರಾ ಶತಕ, ಮುಳಬಾಗಿಲ ಚರಿತ್ರ ಶತಕ, ಶ್ರೀಮದ್ಯವರಾಜ ಕಂಠೀರವ ಕಲ್ಯಾಣ ಶತಕಂ ಇವು ಇಂಥ ಕೃತಿಗಳು. ಕೆ.ರಾಮಸ್ವಾಮಿ ಅಯ್ಯಂಗಾರ್ ಅವರ ದಾರಿದ್ರ್ಯ ಶತಕ, ಕೆರೋಡಿ ಸುಬ್ಬರಾಯರ ಗಂಭೀರ ಶೃಂಗಾರ ಶತಕ ಇವು ಗಮನಾರ್ಹವಾದವು. ಭರ್ತೃಹರಿಯ ಶತಕತ್ರಯವನ್ನು ಬಸಪ್ಪಶಾಸ್ತ್ರಿಗಳು ಕನ್ನಡದಲ್ಲಿ ಪ್ರೌಢವಾಗಿ ಭಾಷಾಂತರಿಸಿದ್ದಾರೆ. ಭರ್ತೃಹರಿಯನ್ನು ಎಸ್.ವಿ ಪರಮೇಶ್ವರಭಟ್ಟ ಹಾಗೂ ಎ.ಕೆ ಪುಟ್ಟರಾಮು ಕನ್ನಡಕ್ಕೆ ಅನುವಾದಿಸಿದ್ದಾರೆ. ಡಿ.ವಿ.ಜಿ ಅವರ ಮಂಕುತಿಮ್ಮನ ಕಗ್ಗ, ಪರಮೇಶ್ವರ ಭಟ್ಟರ ಇಂದ್ರಚಾಪ ಮೊದಲಾದವು ನೂರರ ಮಿತಿಯುಳ್ಳ ಶತಕಗಳಲ್ಲದಿದ್ದರೂ ಸಪ್ತಶತಿಯಂತೆ ಶತಕ ಸಾಹಿತ್ಯದಲ್ಲಿ ಸೇರಿಸಬಹುದು.

ಬಸವ ಶತಕವು ವೃತ್ತದಲ್ಲಿದೆ. ಇದರಲ್ಲಿ 100 ಪದ್ಯಗಳಿವೆ. ಇದರಲ್ಲಿ ಇತಿಹಾಸ, ಪವಾಡ, ಸಾಮಾನ್ಯ ನೀತಿ ಮತ್ತು ಸಮಕಾಲೀನ ಪರಿಸ್ಥಿತಿಯ ಚಿತ್ರಣವಿದೆ. ಭುವನೈಕ್ಯ ನಾಯಕೀ ಶತಕದಲ್ಲಿ ಪಾರ್ವತಿಯನ್ನು ಅನನ್ಯ ಭಕ್ತಿಯಿಂದ ಸ್ತುತಿಸಲಾಗಿದೆ. ಪಾರ್ವತಿಯ ಮಹಿಮೆಯನ್ನು ಕವಿ ಕೊಂಡಾಡಿದ್ದಾನೆ. ಆಕೆಯ ಅಂಗಾಗಗಳನ್ನೂ ಅವುಗಳ ಚೆಲುವನ್ನೂ ಆಕೆ ಲೋಕೈಕ ಸುಂದರಿ ಎಂಬ ದೃಷ್ಟಿಯಿಂದ ವರ್ಣಿಸಿದ್ದಾನೆ. ಈ ಶತಕದಲ್ಲಿ ಪಂಪಾಪುರಾಧೀಶ್ವರಾ ಎಂದು ಮುಗಿಯುವ 100 ವೃತ್ತಗಳಿವೆ. ಪಂಪಾ ಶತಕದಲ್ಲಿ ಪಂಪಾಪುರಾಧೀಶ್ವರಾ ಎಂದು ಮುಗಿಯುವ 101 ವೃತ್ತಗಳಿವೆ. ಈ ಶತಕದಲ್ಲಿ ಕವಿಯು ಶಿವನ ಮಹತ್ವವನ್ನೂ ಮಹಿಮೆಯನ್ನೂ ಹೊಗಳುತ್ತ ಆರ್ತತೆಯಿಂದ ತನ್ನನ್ನು ಉದ್ಧರಿಸಬೇಕೆಂದು ಆತನಲ್ಲಿ ಮೊರೆಯಿಡುತ್ತಾನೆ. ಈ ಶತಕವು ಅಲಂಕಾರ, ಚಮತ್ಕಾರ ಮೊದಲಾದವುಗಳಿಲ್ಲದೆ ಸಹಜ ಸೌಂದರ್ಯದಿಂದ ಕೂಡಿದೆ. ಸಂಗವಿಭುವಿನ ಶೈಲಿ ಬಂಧುರವೂ ಲಲಿತವೂ ಆಗಿದೆ. ಸಂಸ್ಕೃತ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಅವನಿಗೆ ಪಾಂಡಿತ್ಯವೂ ಪ್ರಭುತ್ವವೂ ಇರುವುದು ಅವನ ಕೃತಿಗಳನ್ನು ನೋಡಿದಾಗ ತಿಳಿದುಬರುತ್ತದೆ. 1838ರಲ್ಲಿ ಕ್ರೈಸ್ತ ಪ್ರಾರ್ಥನಾ ಶತಕವೊಂದು ರಚಿತವಾದಂತೆ ತಿಳಿಯುತ್ತದೆ.

**ಕನ್ನಡದ ಮೊದಲ ಶತಕ – ಚಂದ್ರಚೂಡಾಮಣಿ ಶತಕ**

ಕನ್ನಡ ಸಾಹಿತ್ಯದಲ್ಲಿ ಕ್ರಿ.ಶ 1070ರ ಮೊದಲು ಶತಕಗಳ ರಚನೆಯಾದುದು ಕಂಡು ಬರುವುದಿಲ್ಲ. ಕ್ರಿ.ಶ ಸುಮಾರು 1070ರಲ್ಲಿ ನಾಗವರ್ಮಾಚಾರ್ಯನೆಂಬ ಕವಿ ರಚಿಸಿದ 'ತನ್ನಂತೆ ತಾಂ ಪೆರರಂ ಭಾವಿಸೆ ಶಕ್ತಮಿಂತುಟೆ ವಲಂ' ಎನ್ನುವ ಚಂದ್ರಚೂಡಾಮಣಿ ಶತಕವು ಕನ್ನಡ ಶತಕಗಳಲ್ಲೇ ಮೊದಲನೆಯದೂ ಹಿರಿಯದೂ ಆಗಿದೆ. ನಾಗವರ್ಮಾಚಾರ್ಯನ ಕಾಲ ಕ್ರಿ.ಶ ಸುಮಾರು 1070 ಆಗಿರಬೇಕೆಂದು ಕವಿ ಚರಿತೆಕಾರರು ಹೇಳಿದುದನ್ನು ಅನಂತರದ ಹೆಚ್ಚಿನ ಸಾಹಿತ್ಯ ಚರಿತ್ರೆಕಾರರು ಒಪ್ಪಿಕೊಂಡಿರುವರು. ಪ್ರತ್ಯೇಕವಾಗಿ 'ಶತಕ' ಎಂಬ ಹೆಸರಿನಲ್ಲಿ ದ್ರಾವಿಡ ಭಾಷೆಗಳಲ್ಲಿ ರಚಿತವಾದವುಗಳಲ್ಲಿ ಚಂದ್ರಚೂಡಾಮಣಿ ಶತಕವೇ ಮೊದಲನೆಯದು. ಆರ್.ಎನ್. ಜಯಲಕ್ಷ್ಮಿ ಅವರು "ನಾಗಾವರ್ಮಾಚಾರ್ಯನ ಚಂದ್ರಚೂಡಾಮಣಿ ಶತಕವೇ ಮೊದಲನೆಯದು. ಆರ್.ಎನ್.ಜಯಲಕ್ಷ್ಮಿ ಅವರು "ನಾಗವರ್ಮಾಚಾರ್ಯನ ಚಂದ್ರಚೂಡಾಮಣಿ ಶತಕ ಅಥವಾ ಜ್ಞಾನಸಾರವು ಭಕ್ತಿಜ್ಞಾನ, ವೈರಾಗ್ಯ ಬೇಧಕವಾಗಿದ್ದು ಕನ್ನಡ ಸಾಹಿತ್ಯದಲ್ಲಿ ಬ್ರಾಹ್ಮಣ ಕವಿಯೊಬ್ಬನ ಮೊದಲನೆಯ ಸ್ವತಂತ್ರ ಹಾಗೂ ತತ್ತ್ವಪ್ರತಿಪಾದಕ ಗ್ರಂಥವಾಗಿದೆ. ಆದರೆ ಕೆಲವರು ಈ ಕವಿ ಶತಕದ ಅಗ್ರ ಮರ್ಯಾದೆಗೆ ಸಲ್ಲನೆಂದು ವಾದಿಸಿರುವುದುಂಟು. ಧರ್ಮತತ್ತ್ವ ನೀತಿಯನ್ನು ಬೋಧಿಸುವ ಹಾಗೂ ಭಕ್ತಿಯ ಅನುಸಂಧಾನ ಮಾಡುವ ಸಾಹಿತ್ಯ ಪ್ರಕಾರ ಉಗಮಗೊಂಡದ್ದು ಮುಖ್ಯವಾಗಿ ಧರ್ಮಚಿಂತನೆಯ ಅಭಿವ್ಯಕ್ತಿಯಾಗಿ, ಜೈನಕವಿಗಳು ಚಂಪೂ ಪ್ರಕಾರವನ್ನು ಉಚ್ಛ್ರಾಯ ಕಾಲಕ್ಕೆ ಏರಿಸುತ್ತಿದ್ದ ಕಾಲದಲ್ಲಿ ಮೆಲ್ಲಮೆಲ್ಲನೆ ಸಾಹಿತ್ಯ ಪ್ರವೇಶ ದೊರಕಿಸಿಕೊಳ್ಳುತ್ತ ಬ್ರಾಹ್ಮಣ ಕವಿಗಳು ಶತಕ ಮೊದಲಾದ ಸಣ್ಣಪುಟ್ಟ ಸಾಹಿತ್ಯ ಪ್ರಕಾರಗಳನ್ನು ಕೈಗೆತ್ತಿಕೊಂಡರೆಂಬುದನ್ನು ಈ

ಚಂದ್ರಚೂಡಾಮಣಿ ಶತಕ ರಚನೆ ನಿರ್ದೇಶಿಸುವಂತಿದೆ ಎಂದಿದ್ದಾರೆ.

ಅದ್ವೈತಿಯೂ ದೊಡ್ಡ ಪಂಡಿತನೂ ಆಗಿದ್ದ ನಾಗವರ್ಮಾಚಾರ್ಯನಿಂದ ರಚಿತವಾದ ಈ ಶತಕದಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳ ವಿವರಣೆಯಿಂದಿರುವುದಾದರೂ ಮುಖ್ಯವಾಗಿ ಇದು ವೈರಾಗ್ಯ ವಿಷಯವನ್ನೇ ಪ್ರತಿಪಾದಿಸುತ್ತದೆ. ಇದರಲ್ಲಿ ನೂರನಾಲ್ಕು ಮತ್ತೇಭ ವಿಕ್ರೀಡಿತ ವೃತ್ತಗಳಿವೆ. ಪ್ರತಿಪದ್ಯವೂ 'ಶ್ರೀ ಚಂದ್ರಚೂಡಾಮಣೀ' ಎಂಬ ಅಂಕಿತದಿಂದ ಕೊನೆಗೊಳ್ಳುವುದರಿಂದ ಇದಕ್ಕೆ ಚಂದ್ರಚೂಡಾಮಣಿ ಶತಕವೆಂಬ ಹೆಸರು ರೂಢಿಯಲ್ಲಿದ್ದರೂ ಕವಿಯು ಇದನ್ನು 'ಜ್ಞಾನಸಾರ'ವೆಂದು ಕರೆದಿದ್ದಾನೆ. ಇದರ ಶೈಲಿಯು ಲಲಿತವೂ ಗಂಭೀರವೂ ಆಗಿದೆ. ಕವಿಯು ತನ್ನ ಗ್ರಂಥದಲ್ಲಿ–

*ಉದಯಾದಿತ್ಯನ ಸಂಧಿ ವಿಗ್ರಹಿಲಲಾಮಂ ನಾಗವರ್ಮಂ ಸಮಂ*
*ತುದಯಾದಿತ್ಯನ ರಾಯಭಾರಿಯರನಿಸಿರ್ದಾತ್ಮಾಗ್ರಜಂ ಭಾಸ್ಕರಂ*
*ಮೊದಲಾದೀಶ್ವರ ಭಕ್ತರಪ್ಪಿವರ್ಗೆ ಪೇಳ್ದೀಜ್ಞಾನ ಸಾರಂ ಸುಖಾ*
*ಸ್ಪದಮೊಲ್ದೋದುಗೆ ಭುಕ್ತಿ ಮುಕ್ತಿ ಫಲಮಂ ಶ್ರೀ ಚಂದ್ರಚೂಡಾಮಣೀ.*

ಕ್ರಿ.ಶ 1000ರಲ್ಲಿ ನಂಜುಂಡ ಶತಕ ಮತ್ತು ನಿಜಲಿಂಗ ಶತಕಗಳೆಂಬ ಎರಡು ಕೃತಿಗಳು ರಚನೆಯಾಗಿವೆ. ನಂಜುಂಡ ಶತಕವನ್ನು ರಚಿಸಿದವನು ಕಪ್ಪಿನಿ.ಈತನು ವೀರಶೈವ ಕವಿ. ತನ್ನ ಗ್ರಂಥವನ್ನು ನಂಜನಗೂಡು ನಂಜುಂಡೇಶ್ವರನ ಅಂಕಿತದಲ್ಲಿ ಬರೆದಿದ್ದಾನೆ. 103 ಕಂದ ಪದ್ಯಗಳಿರುವ ನಂಜುಂಡ ಶತಕವು ನೀತಿಬೋಧಕ ಗ್ರಂಥ. ಸಂಸ್ಕೃತ ಶ್ಲೋಕಗಳನ್ನು ಕವಿ ಕನ್ನಡಕ್ಕೆ ಪರಿವರ್ತಿಸಿದಂತೆ ತಿಳಿಸುತ್ತದೆ. ಪ್ರತಿಪದ್ಯವೂ 'ನಂಜುಂಡಲಿಂಗ ನತಜನಸಂಗಾ' ಎಂದು ಮುಗಿಯುವುದರಿಂದ ಇದಕ್ಕೆ ನಂಜುಂಡಲಿಂಗ ಶತಕವೆಂದೂ ಹೆಸರಿದೆ. ತನ್ನ ಕೃತಿಯು ಮಾತಿನ ಸುಧೆ, ತುಂಬಿದ ಕೊಡ, ನೀತಿಯ ಮಾಫಲದ ಸಾರ, ಸಂಸಾರಾಬ್ಧಿಗೆ ಸೇತುವೆ ಎಂದು ಕವಿ ಹೇಳುತ್ತಾನೆ. ನಿಜಲಿಂಗ ಶತಕವನ್ನು ಬರೆದವರು ನಿಜಲಿಂಗಾರಾಧ್ಯ. ವೀರಶೈವ ಕವಿಯಾದ ಈತನು ತುಂಗಭದ್ರಾ ತೀರದಲ್ಲಿರುವ ಖಾದ್ರೀಪುರದ ನಿಜಲಿಂಗೇಶ್ವರನ ಅಂಕಿತದಲ್ಲಿ ಈ ಗ್ರಂಥವನ್ನು ಬರೆದಿರುವರು.ವಾರ್ಧಕಷಟ್ಪದಿಯಲ್ಲಿರುವ ನಿಜಲಿಂಗ ಶತಕದಲ್ಲಿ 100 ಪದ್ಯಗಳಿವೆ. ಪ್ರತಿ ಪದ್ಯದಲಿಯೂ "ನಿಜಲಿಂಗ ಭವಭಂಗಶರಣಜನ ಭಕ್ತಿಸಂಗ" ಎಂಬ ಅಂಕಿತವಿದೆ. ಗ್ರಂಥವು ಶಿವಸ್ತುತಿರೂಪವಾಗಿಯೂ ನೀತಿ ವೈರಾಗ್ಯ ಬೋಧಕವಾಗಿಯೂ ತತ್ತ್ವ ನಿರೂಪಕವಾಗಿಯೂ ಇದೆ.

**ಹತ್ತೊಂಬತ್ತನೆಯ ಶತಮಾನ**

ಹತ್ತೊಂಬತ್ತನೆಯ ಶತಮಾನದಲ್ಲಿ ಸುಮಾರು 50ಕ್ಕೂ ಹೆಚ್ಚು ಶತಕಗಳ ರಚನೆಯಾಗಿದೆ. ಕೆಲವು ಶತಕಗಳ ಕರ್ತೃಗಳು ಯಾರೆಂದು ತಿಳಿಯುವುದಿಲ್ಲ. ಸುಮಾರು ಕ್ರಿ.ಶ 1830ರಲ್ಲಿದ್ದ ಗೋಕರ್ಣದ ಶ್ರೀನಿವಾಸನೆಂಬ ಬ್ರಾಹ್ಮಣ ಕವಿಯು ಮುಮ್ಮಡಿ ಕೃಷ್ಣರಾಜನ ವರ್ಷವರ್ಧಂತಿಯ ಮಹೋತ್ಸವವನ್ನು ನೋಡಿ ಅದರ ವೈಭವದ ವರ್ಣಣೆಯನ್ನು ಕೃಷ್ಣರಾಜ ವರ್ಷವರ್ಧಂತೀ ಶತಕವೆಂಬ ಹೆಸರಿನಲ್ಲಿ ರಚಿಸಿದ್ದಾನೆ. ಇದರಲ್ಲಿ ಮೂರು ಸಂಧಿಗಳಿವೆ. 101 ವಾರ್ಧಕಷಟ್ಪದಿಯಲ್ಲಿರುವ ಈ ಕೃತಿಯ ಆರಂಭದಲ್ಲಿ ಲಕ್ಷ್ಮಿಯ ಹಾಗೂ ಚಾಮುಂಡಿಯ ಸ್ತುತಿಯಿದೆ. ಇದರಲ್ಲಿ ಆಗಿನ ರಾಜಧಾನಿ ನಗರವಾದ ಮೈಸೂರಿನ ವರ್ಣನೆಯೂ, ವರ್ಧಂತೀ ಮಹೋತ್ಸವದಲ್ಲಿ ನಡೆಯುವ ಎಲ್ಲಾ ಪದ್ಧತಿಗಳೂ ಕ್ರಮವಾಗಿ ವರ್ಣಿತವಾಗಿವೆ. ಸಂಗವಿಭು ಎಂಬ ಕವಿಯು ಕ್ರಿ.ಶ 1832ರಿಂದ 1856 ಅವಧಿಯಲ್ಲಿ ಬಸವ ಶತಕ, ಭುವನೈಕ್ಯ ನಾಯಕೀ ಶತಕವೊಂದನ್ನುಳಿದು ಇತರ ಎರಡು ಕೃತಿಗಳಲ್ಲಿಯೂ ಸಂಗವಿಭು ತಾನೇ ಕೃತಿಕರ್ತನೆಂದು ಹೇಳಿಕೊಂಡಿದ್ದಾನೆ. ಆದರೂ ಶೈಲಿ, ಭಾಷೆ, ಭಾವ ಮೊದಲಾದವುಗಳಿಂದಲೂ ಇತರ ಆಧಾರಗಳಿಂದಲೂ ಭುವನೈಕ್ಯ ನಾಯಕೀ ಶತಕವೂ ಇದೇ ಕವಿಯಿಂದ ರಚಿತವಾಗಿದೆಯೆಂದು ಹೇಳಬಹುದು.

ಪರ್ವತಯ್ಯ ಎಂಬ ವೀರಶೈವ ಕವಿಯು ಷಟ್ಪದಿಯಲ್ಲಿ ಖೈರೂಪಳಿ ವೀರಭದ್ರ ಶತಕವನ್ನೂ, ವೆಂಕಣ್ಣನೆಂಬ ಕವಿಯು ಪಾರ್ವತೀವಲ್ಲಭ ಶತಕವನ್ನೂ ಬರೆದರು. ಕವಿರಾಜನ್ ಕೃತ ಸಂತಾಪ ಶತಕದಲ್ಲಿ ಒಟ್ಟು 109 ಕಂದಪದ್ಯಗಳಿವೆ. ಇದರಲ್ಲಿ ಬೆಳ್ಳಾವೆಯ ಸಮೀಪದಲ್ಲಿರುವ ಗೊಲ್ಲಪಳ್ಳಿರಂಗೇಶ್ವರನ ಮಹಿಮೆ ಮತ್ತು ಶಾಶ್ವಾದ ವೈಷ್ಣವರು ರಂಗೇಶನನ್ನು ಅರ್ಚಿಸಲು ಇಲ್ಲಿ ಬಂದು ನೆಲಸಿದ ವಿಚಾರವಿದೆ. ಸೂರಕೋಡನ ಚನ್ನಕವಿಯು ಸುನೀತಿ ಶತಕವನ್ನೂ, ಬ್ರಾಹ್ಮಣ ಕವಿ ಶ್ರೀನಿವಾಸನು ಕಂದದಲ್ಲಿ ಸುಮತಿ ಶತಕವನ್ನೂ ಸ್ಮಾರ್ತಕವಿ ಅಂಬಳೆ ಲಕ್ಷ್ಮೀನರಸಿಂಹ ಶಾಸ್ತ್ರಿಯು ಕಂದದಲ್ಲಿ ಸುಮತಿ ಶತಕ ಹಾಗೂ ಭಾನು ಶತಕಗಳನ್ನೂ ಬರೆದಿರುವರು.ಭಾನು ಶತಕದಲ್ಲಿ 109 ಕಂದಗಳೂ ಸುಮತಿ ಶತಕದಲ್ಲಿ 110 ಕಂದಗಳೂ ಇವೆ.

ಆಂಜನೇಯ ಶತಕ, ನಂಜುಂಡೇಶ್ವರ ಶತಕ, ಮರುಳಸಿದ್ಧೇಶ್ವರ ಶತಕ, ರಾಜರಾಜೇಶ್ವರಿ ಶತಕ, ವರ್ಧಂತಿ ಶತಕ ಮತ್ತು ನಂ.ಶಿವಪ್ಪ ಶಾಸ್ತ್ರಿಯು ವೃತ್ತದಲ್ಲಿ ರಚಿಸಿದ ಟೀಕುಸಹಿತವಾದ ಶಿವಮಹಿಮಾಶತಕ ಮೊದಲಾದವು ಹತ್ತೊಂಬತ್ತನೆಯ ಶತಮಾನದಲ್ಲಿ ರಚಿತವಾಗಿರಬಹುದಾದ ಇನ್ನಿತರ ಶತಕಗಳು.

**ಇಪ್ಪತ್ತನೆಯ ಶತಮಾನ**

ಇಪ್ಪತ್ತನೆಯ ಶತಮಾನವು ಶತಕಗಳ ರಚನೆಗೆ ಸುಗ್ಗಿಯ ಕಾಲವೆನ್ನಬಹುದು. ಸಂಖ್ಯಾದೃಷ್ಟಿಯಿಂದ ನೋಡಿದರೆ ನೂರ ಐವತ್ತಕ್ಕೂ ಹೆಚ್ಚು ಶತಕಗಳು ಕಳೆದ ಶತಮಾನದಲ್ಲಿ ರಚಿತವಾಗಿವೆ. ಶತಕಗಳ ರಚನೆಯಲ್ಲಿ ವೈವಿಧ್ಯವಿದ್ದರೂ ಈ

ಕಾಲದಲ್ಲಿ ರಚಿತವಾದ ಶತಕಗಳ ವಸ್ತು, ಶೈಲಿ, ಛಂದಸ್ಸು ಮುಂತಾದ ವಿಷಯಗಳನ್ನು ಅವಲೋಕಿಸಿದಾಗ ಉತ್ತಮವೆನ್ನಬಹುದಾದ ಶತಕಗಳು ಕೆಲವು ಮಾತ್ರ ಎನ್ನಬಹುದು. ಹಿಂದಿನ ಶತಕ ಕವಿಗಳು ಅನುಸರಿಸಿದ ಮಕುಟ ನಿಯಮ, ಛಂದೋನಿಯಮಗಳನ್ನಾಗಲೀ, ವಸ್ತುನಿಯಮವನ್ನಾಗಲೀ, ಈ ಕಾಲದ ಹೆಚ್ಚಿನ ಕವಿಗಳು ಅನುಸರಿಸಿಲ್ಲ. ಆಧುನಿಕ ವಿಚಾರಗಳನ್ನೊಳಗೊಂಡ ಅನೇಕ ಶತಕಗಳು, ಸಂಸ್ಕೃತ– ತೆಲುಗು ಮೊದಲಾದ ಭಾಷೆಗಳಿಂದ ಅನುವಾದಗೊಂಡ ಅನೇಕ ಶತಕಗಳೂ ಈ ಕಾಲದಲ್ಲಿ ರಚಿತವಾಗಿವೆ. ಕೆಲವು ಶತಕಗಳಂತೂ ಕೇವಲ ನೂರು ಪದ್ಯಗಳಿಂದ ಕೂಡಿ ಹೆಸರಿಗೆ ಮಾತ್ರ ಶತಕಗಳೆನ್ನಿಸಿವೆ. ಇದರಿಂದ ಶತಕ ಸಾಹಿತ್ಯದ ಮಹತ್ವ ಕಡಿಮೆಯಾಗಲಾರಂಭಿಸಿದೆ. ವ್ಯಕ್ತಿಗತ ಜೀವನ ಚರಿತ್ರೆಯನ್ನು ನಿರೂಪಿಸುವ ಅನೇಕ ಶತಕಗಳು ಈ ಕಾಲದಲ್ಲಿ ಪ್ರಕಟವಾಗಿರುವುದು ಸಂತೋಷದ ವಿಚಾರ. ಕೆಲವು ಶತಕಗಳಿಗೆ ಉಪಯುಕ್ತ ಪೀಠಿಕೆಗಳನ್ನೂ ಕೆಲವಕ್ಕೆ ಟೀಕುಗಳನ್ನೂ ಸಂಪಾದಕರು ಕೊಟ್ಟಿದ್ದಾರೆ. ಇಪ್ಪತ್ತನೆಯ ಶತಮಾನದಲ್ಲಿ ರಚಿತವಾದ ಚೆಲ್ವನಾರಾಯಣ ಶತಕ.ಲೋಕ ನೀತಿ ನಿರೂಪಕವಾದ ಈ ಶತಕದಲ್ಲಿ ನೂರಮೂರು ವೃತ್ತಗಳಿವೆ. ಪ್ರತಿಪದ್ಯವೂ ಶ್ರೀ ಚೆಲ್ವನಾರಾಯಣ ಎಂದು ಅಂತ್ಯವಾಗುತ್ತದೆ.

**ಉಪಸಂಹಾರ**

ಒಟ್ಟಾರೆ ಶತಕ ಸಾಹಿತ್ಯ ಕನ್ನಡದಲ್ಲಿ ಒಂದು ಸಾವಿರ ವರ್ಷದ ಹರಹನ್ನು ಪಡೆದಿದೆ. ನಾನೂರಕ್ಕೂ ಹೆಚ್ಚು ಶತಕಗಳಿದ್ದರೂ ಜನಪ್ರಿಯವಾದವು, ಉತ್ತಮವಾದವು ಕೆಲವು ಮಾತ್ರ. ನೂರು ಪದ್ಯವಿದ್ದರೆ ಸಾಕು, ಏನು ಬರೆದರೂ ಸಲ್ಲುತ್ತದೆ ಎಂದು ಹೊರಟ ಕಾರಣ ಶತಕವೆಂದರೆ ಶುಷ್ಕ ಎಂಬ ಭಾವನೆ ಬೆಳೆದಿದೆ. ಶೃಂಗಾರ ಶತಕಗಳು ಒಂದೆರಡು ಮಾತ್ರ ಇವೆ. ಬಹುಪಾಲು ಕನ್ನಡ ಶತಕಗಳು ಸ್ತೋತ್ರ, ದೈವನಾಮಾವಳಿಗಳಿಂದ ತುಂಬಿ ಸಾಹಿತ್ಯವೆಂಬ ಹೆಸರಿಗೆ ಹೊರತಾಗಿವೆ. ಹರಿಹರ, ರತ್ನಾಕರವರ್ಣಿಯಂಥ ಒಬ್ಬಿಬ್ಬರು ಮಾತ್ರ ಸಂಸ್ಕೃತ ಶತಕ ಸಾಹಿತ್ಯಕ್ಕೆ ಹೆಗಲೆಣೆಯಾಗಿ ನಿಲ್ಲಬಲ್ಲ ಕವಿಗಳಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಶ್ರೀಕೃಷ್ಣ ಭಟ್ ಅರ್ತಿಕಜೆ. (2002). *ಕನ್ನಡದಲ್ಲಿ ಶತಕ ಸಾಹಿತ್ಯ.* ಶ್ರೀ ಭಗವತ್ಪಾದ ಪ್ರಕಾಶನ
- ಕಾಶಿ ವಿಶ್ವನಾಥ ಶೆಟ್ಟಿ. (1976). *ಕನ್ನಡ ಶತಕ ಸಾಹಿತ್ಯ.* ಶ್ರೀ ವೀರೇಂದ್ರ ಪ್ರಕಾಶನ.
- ಗುಂಜೆಟ್ಟಿ ಬಿ.ವಿ. (1972). ಕನ್ನಡದಲ್ಲಿ ಶತಕ ಸಾಹಿತ್ಯ. ಕರ್ನಾಟಕ ವಿಶ್ವವಿದ್ಯಾನಿಲಯ.
- ಹೊಳ್ಳ ಡಿ.ವಿ. (1959). ಕುಂದೇಶ್ವರ ಶತಕ.
- ವೆಂಕಟಾಚಲಶಾಸ್ತ್ರಿ ಟಿ.ವಿ. (1974). *ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–1.* ಕನ್ನಡ ಅಧ್ಯಯನ ಸಂಸ್ಥೆ, ಪು.665
- ಶಿವಲಿಂಗಯ್ಯ ಗು ಅ. (1972). *ಕರ್ನಾಟಕ ಭಾರತಿ.* ಸಂ.1 (3).
- ಮರಿಯಪ್ಪಭಟ್ಟ ಎಂ. (1967). *ಕನ್ನಡ ಸಂಸ್ಕೃತಿ.* ಪು.193–194.